18 ಸಾವಿರ ಅರ್ಜಿ ಸಲ್ಲಿಸಿದವರಲ್ಲಿ 4 ಸಾವಿರ ಅನರ್ಹರು | ದಾಖಲಾತಿ ಪರಿಶೀಲನೆಯಲ್ಲಿ ಬಯಲು

ರೈತರ ಸೀಟಿಗೂ ಖೊಟ್ಟಿ ದಾಖಲೆ

■ **ದೇವರಾಜ್ ಕನಕಪುರ** ಬೆಂಗಳೂರು
devaraj.l@timesgroup.com

ಕೃಷಿ ಕೋರ್ಸ್‌ಗಳಿಗೆ ಕೃಷಿಕರ ಕೋಟಾದ ಸೀಟುಗಳನ್ನು ಪಡೆಯುವುದಕ್ಕೆ ನಡೆಸಿರುವ ಪ್ರಯತ್ನಗಳು ವಿಫಲವಾಗಿದೆ. ಕೃಷಿಕರು ಎಂಬ ಅರ್ಹ ದಾಖಲೆ ಸಲ್ಲಿಸುವಲ್ಲಿ ವಿಫಲವಾಗಿರುವ 4 ಸಾವಿರ ವಿದ್ಯಾರ್ಥಿಗಳು ಕೃಷಿಕ ಕೋಟಾದ ಸೀಟಿನಿಂದ ವಂಚಿತರಾಗಿದ್ದಾರೆ.

ಕೃಷಿಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಸೀಟುಗಳಲ್ಲಿ ಶೇ.50ರಷ್ಟು ಕೃಷಿಕರಿಗೆ ಮೀಸಲಿಡಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿಇಟಿಯಲ್ಲಿ ಕೃಷಿ ಕೋಟಾದಡಿ ಮೀಸಲು ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿತ್ತು. 18,650 ವಿದ್ಯಾರ್ಥಿಗಳು ಸಲ್ಲಿಸಿದ್ದು, 14,190ಮಂದಿ ಕೃಷಿಕರು ಎಂಬುದಕ್ಕೆ ದಾಖಲೆ ಸಲ್ಲಿಸಿದ್ದಾರೆ. ಕೆಲವು ಉದ್ಯಮಿಗಳು, ಕೃಷಿ ಹಿನ್ನೆಲೆ ಇಲ್ಲದವರು, ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡುವವರು ತಮ್ಮ ಮಕ್ಕಳನ್ನು ಕೃಷಿಕರು ಎಂದು ನಮೂದಿಸಿದ್ದ 4,460 ವಿದ್ಯಾರ್ಥಿಗಳ ದಾಖಲೆ ಸಮರ್ಪಕ ಇರಲಿಲ್ಲ. ಈ ಕಾರಣಕ್ಕೆ ಕೃಷಿ ಕೋಟಾ ಸೀಟುಗಳಿಗೆ ಅನರ್ಹರು ಎಂದು ಪ್ರಾಧಿಕಾರ ಗುರುತಿಸಿದೆ.

ಸಮಸ್ಯೆ ಏನು?: ಈ 4,460 ವಿದ್ಯಾರ್ಥಿಗಳಲ್ಲಿ ಬಹುತೇಕರ ಪೋಷಕರು ಖಾಸಗಿ ವಲಯದಲ್ಲಿ ಕೆಲಸ ಮಾಡುತ್ತಲೇ ಕೃಷಿ ಮಾಡುತ್ತಿದ್ದು ಸಂಬಳಕ್ಕಿಂತ ಕೃಷಿ ಆದಾಯ ಹೆಚ್ಚಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಬಹುತೇಕರು ಕೃಷಿ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಿಲ್ಲ. ದಾಖಲೆಗಳೇ ಇಲ್ಲದಿರುವ ಅರ್ಜಿಗಳು ಹೆಚ್ಚಿವೆ. ಒಬ್ಬವ್ಯಕ್ತಿ ಕೃಷಿ ಜತೆಗೆ ನೌಕರಿ ಮಾಡಿಕೊಂಡು ಕೃಷಿಯಲ್ಲಿ ಹೆಚ್ಚು ಆದಾಯ ತೋರಿಸಿದರೆ, ಕೃಷಿಯನ್ನೇ ಪ್ರಧಾನ ವೃತ್ತಿ ಎಂದು ಪರಿಗಣಿಸಲಾಗುತ್ತದೆ. ಆ ವೇಳೆ ಕೃಷಿಕರ ಸೀಟು ಪಡೆಯಲು ಅರ್ಹತೆ ಪಡೆಯುತ್ತಾರೆ. ಕೃಷಿಕರ ಕೋಟಾದ ಸೀಟುಗಳು ಶ್ರೀಮಂತರ ಪಾಲಾಗುತ್ತಿವೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಪ್ರಾಧಿಕಾರ ಪಟ್ಟಿ ಬಿಡುಗಡೆ ಮಾಡಿದೆ.

ಏಕೆ ಪ್ರಾಯೋಗಿಕ ಪರೀಕ್ಷೆ ಇಲ್ಲ?: ಕೃಷಿ ವಿಶ್ವವಿದ್ಯಾಲಯ ಕೃಷಿಕರ ಕೋಟಾದ ಸೀಟಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆಯೋಜಿಸುವ ಪ್ರಾಯೋಗಿಕ ಪರೀಕ್ಷೆಗೆ ಕೋಚಿಂಗ್ ಕೇಂದ್ರಗಳ ಹಾವಳಿ ಕಾರಣವಾಯಿತೇ ಎಂಬ ಅನುಮಾನ ವ್ಯಕ್ತವಾಗಿದೆ. ಏಕೆಂದರೆ, ಕೆಲ ಪ್ರತಿಷ್ಠಿತ ಕೋಚಿಂಗ್ ಕೇಂದ್ರಗಳು ವಿಶೇಷ 'ಕ್ರಾಷ್ ಕೋರ್ಸ್' ಆಯೋಜನೆ ಮಾಡುವ ಮೂಲಕ ಕೃಷಿಯ ಅಲ್ಪ ಜ್ಞಾನವೂ ಇಲ್ಲದವರಿಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಜ್ಞಾನ ತುಂಬಿ ಕಳುಹಿಸುವ ಕೆಲಸ ಮಾಡುತ್ತಿವೆ. 15-20 ದಿನಗಳ ಪ್ರಾಯೋಗಿಕ ಪರೀಕ್ಷೆಗೆ ವಿದ್ಯಾರ್ಥಿಗಳಿಂದ 18-20 ಸಾವಿರ ರೂ. ಶುಲ್ಕ ಪಡೆದು ರಾಗಿ, ಜೋಳ, ಭತ್ತ, ಕಡಲೆ ಬೀಜ ಬಿತ್ತನೆ ಮಾಡುವುದು, ಅವುಗಳನ್ನು ಗುರುತಿಸುವುದು ಈ ರೀತಿಯ ತರಬೇತಿ ನೀಡುತ್ತವೆ. ಇದು ಕ್ರಾಷ್ ಕೋರ್ಸ್ ಆಗಿದ್ದು, ಈ ಸೀಸನ್‌ನಲ್ಲಿ ಪ್ರತಿ ತರಬೇತಿ ಕೇಂದ್ರ ಕನಿಷ್ಠ 15 ಲಕ್ಷ ರೂ. ಹಣ ಸಂಪಾದನೆ ಮಾಡುತ್ತವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದು ಮಾಡುವ ವಿಚಾರವನ್ನು ವಿವಿಯು ಸಚಿವ ಸಂಪುಟದ ಮುಂದೆ ತರಲು ನಿರ್ಧರಿಸಿದೆ.



18,650	14,190	4,460
ವಿದ್ಯಾರ್ಥಿಗಳಿಂದ ಕೃಷಿ ಕೋಟಾಕ್ಕೆ ಅರ್ಜಿ ಸಲ್ಲಿಕೆ	ಮಂದಿಯಿಂದ ಕೃಷಿಕರೆಂಬುದಕ್ಕೆ ಸಮರ್ಪಕ ದಾಖಲೆ	ವಿದ್ಯಾರ್ಥಿಗಳ ಪೂರಕ ದಾಖಲೆ ಸಲ್ಲಿಸದೇ ತಿರಸ್ಕಾರ

ಕೃಷಿ ಕೋಟಾಕ್ಕೆ ಏನೆಲ್ಲಾ ಬೇಕು

- ಸಿಇಟಿ ಪ್ರವೇಶ ಪತ್ರ
- ವ್ಯವಸಾಯ ಪ್ರಮಾಣ ಪತ್ರ 3
- ವ್ಯವಸಾಯ ಆದಾಯ ಪತ್ರ
- ವೇತನ ದೃಢೀಕರಣ ಪತ್ರ (ಜತೆಗೆ ನೌಕರಿಯಾಗಿದ್ದಲ್ಲಿ ಮಾತ್ರ)
- ಖಾಸಗಿ ಆದಾಯ ಪ್ರಮಾಣ ಪತ್ರ (ಜತೆಗೆ)
- ಅಫಿಡವಿಟ್

ಕ್ರಾಷ್ ಕೋರ್ಸ್ ಕಥೆ

15-20 ದಿನಗಳ ಪ್ರಾಯೋಗಿಕ ಪರೀಕ್ಷೆ

18-20 ಸಾವಿರ ರೂ. ಶುಲ್ಕ ಸಂಗ್ರಹ

15 ಲಕ್ಷ ರೂ. ಪ್ರತಿ ತರಬೇತಿ ಕೇಂದ್ರದ ಸಂಪಾದನೆ

ಕೃಷಿಕರ ಕೋಟಾದಡಿ ಸೀಟು ಪಡೆಯಲು ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು. ಆದರೆ, ಈ ರೀತಿ ಸಲ್ಲಿಸದ ವಿದ್ಯಾರ್ಥಿಗಳನ್ನು ಅನರ್ಹರು ಎಂದು ಪರಿಗಣಿಸಲಾಗುತ್ತದೆ. ದಾಖಲಾತಿ ಪರಿಶೀಲನೆ ವೇಳೆ ಈ ಪ್ರಕರಣ ಕಂಡು ಬಂದಿದೆ. ಬಹುತೇಕ ಶ್ರೀಮಂತರು ಈ ರೀತಿ ಕೆಲಸ ಮಾಡುತ್ತಾರೆ.

- ಡಾ. ಬಸವೇಗೌಡ
ಕುಲಸಚಿವ, ಬೆಂ ಕೃಷಿ ವಿವಿ

17-06-2023
V-karanataka Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

17-06-2023
Kannadaprabha Pg 03

ಗೋಡಂಬಿ ಸಂಸ್ಕರಣ ಕ್ಷೇತ್ರದಲ್ಲಿ ಹೊಸ ಹಾದಿ ಹಿಡಿದ ಅನ್ವೇಷಕ ಗಣೇಶ್ ಪ್ರಭು

ಭಾರತದ ಆಹಾರ ಸಂಸ್ಕರಣ ಉದ್ಯಮದಲ್ಲಿ ಹಿಂದೂಸ್ತಾನ್ ಮುಕ್ತಾ ಕ್ಯಾಶ್ಯೂ ಪ್ರೋಸೆಸಿಂಗ್ ಯೂನಿಟ್ ಅತ್ಯಂತ ದೊಡ್ಡ ಹೆಸರು. ಆದರಲ್ಲೂ ಗೋಡಂಬಿ ಸಂಸ್ಕರಣೆಯಲ್ಲಿ ದೇಶದಲ್ಲೇ ನಾಲ್ಕನೆ ದೊಡ್ಡ ಸಂಸ್ಕರಣ ಘಟಕ ಎಂಬ ಕೀರ್ತಿ ಇದರದ್ದು. ಗೋಡಂಬಿ ಉತ್ಪನ್ನಗಳ ಬಹುದೊಡ್ಡ ಮಾರುಕಟ್ಟೆಯನ್ನು ಯಶಸ್ವಿಯಾಗಿ ತನ್ನ ತೆಕ್ಕೆಗೆ ತೆಗೆದುಕೊಂಡ ಸಂಸ್ಥೆ ಎಂಬ ಹೆಗ್ಗಳಿಕೆ.

ಈ ಯಶಸ್ಸಿನ ರೂವಾರಿ ಬಿ.ವಿ ಗಣೇಶ್ ಪ್ರಭು. ತಮ್ಮ ಕನಸಿನ ಯೋಜನೆಗಳನ್ನು ಕಾಲಕಾಲಕ್ಕೆ ಅನುಷ್ಠಾನ ಗೊಳಿಸುತ್ತಾ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನು ಗಣೇಶ್ ಪ್ರಭು ಏರಿದ ರೀತಿಯೇ ಒಂದು ರೋಚಕ ಕಥೆ

ಖಾಸಗಿ ಕಂಪನಿಯಲ್ಲಿ ನೌಕರಿಯಲ್ಲಿದ್ದ ಗಣೇಶ್ ಪ್ರಭು ಉದ್ಯಮಿಯಾಗಿದ್ದು ಆವರ ಜೀವನದ ಬಹುದೊಡ್ಡ ತಿರುವು. ಕ್ವಾಲಿಟಿ ಬಿಸ್ಟಟ್ ಸಮೂಹದ ಅಂಗಸಂಸ್ಥೆಯಾದ ಶ್ರೇಷ್ಠಾ ಕನ್ಫೆಕ್ಷನರೀಸ್ ಸಂಸ್ಥೆಯಲ್ಲಿ ಮೊದಲ ನೌಕರಿ ದೊರಕಿದಾಗ ಗಣೇಶ್ ಪ್ರಭುಗೆ ಖುಷಿಯೋ ಖುಷಿ. ಅಲ್ಲಿ ಗಣೇಶ್ ಪ್ರಭು ನೌಕರಿ ಆರಂಭಿಸಿದ್ದು ಕಂಪ್ಯೂಟರ್ ಆಪರೇಟರ್ ಆಗಿ. ನಾಲ್ಕು ವರ್ಷದ ನಂತರ ಬ್ರಿಟಾನಿಯಾ ಸಂಸ್ಥೆ ಆ ಕಂಪನಿಯನ್ನು ಖರೀದಿಸಿತು. ಅಲ್ಲಿದ್ದ ನೌಕರರನ್ನೆಲ್ಲಾ ಮನೆಗೆ ಕಳಿಸಿಬಿಟ್ಟಿತು.

ವಿಪರ್ಯಾಸ ನೋಡಿ, ಈಗ ಅದೇ ಬ್ರಿಟಾನಿಯಾ ಸಂಸ್ಥೆಗೆ ಗಣೇಶ್ ಪ್ರಭು ಆತಿದೊಡ್ಡ ಗೋಡಂಬಿ ಪೂರೈಕೆದಾರ. ಇದು ಅಷ್ಟು ಸುಲಭಕ್ಕೆ ದಕ್ಕಿದ ಯಶಸ್ಸಲ್ಲ. 2001 ರಲ್ಲಿ ಕೆಲಸ ಕಳೆದುಕೊಂಡ ಗಣೇಶ್ ಪ್ರಭು, 2023ಕ್ಕೆ ಅದೇ ಬ್ರಿಟಾನಿಯಾ ಕಂಪನಿಯಿಂದ ಪ್ರಶಂಸಾಪತ್ರ ಪಡೆದಿದ್ದು, ಇಷ್ಟೆಲ್ಲಾ ಸಾಧನೆಯ ಹಿಂದೆ 22 ವರ್ಷಗಳ ಸತತ ಪರಿಶ್ರಮವಿದೆ. ಗಣೇಶ್ ಪ್ರಭು ಆವರ ದೂರದರ್ಶಿತ್ವ ಇದೆ. ಏನಾದರೂ ಸಾಧಿಸಬೇಕೆಂಬ ಛಲವಿದೆ.



2001ನೇ ಇಸವಿಯಲ್ಲಿ ಕೆಲಸ ಕಳೆದುಕೊಂಡಾಗ ಸ್ನೇಹಿತನೊಬ್ಬನಸಲಹೆಯಂತೆ ಗಣೇಶ್ ಪ್ರಭು ಆರಿಸಿಕೊಂಡದ್ದು ಚಾಕೊಲೇಟ್ ಉತ್ಪನ್ನಗಳ ಮಾರಾಟವನ್ನು. ಚಾಕೊಲೇಟ್ ಸಾಸ್, ಚಾಕೋಲೇಟ್ ಬಾರ್ ನಂಥ ಇಂಡಸ್ಟ್ರಿಯಲ್ ಚಾಕೊಲೇಟ್ ಉತ್ಪನ್ನಗಳನ್ನು ಖರೀದಿಸಿ ಮಾರಾಟ ಮಾಡುವ ಕಾಯಕಕ್ಕೆ ಕೈಹಾಕಿದ್ರು. ವೈಯಕ್ತಿಕ ಶ್ರಮ ಹಾಕಿ ಐಸ್ ಕ್ರೀಮ್ ಉತ್ಪಾದಕರನ್ನು ಭೇಟಿ ಮಾಡಿ ತಮ್ಮ ಉತ್ಪನ್ನಗಳಿಗೆ ಒಳ್ಳೆ ಗ್ರಾಹಕರನ್ನು ಗಣೇಶ್ ಪ್ರಭು ಸಂಪಾದಿಸಿದ್ರು. ತಮ್ಮ ಬಹುತೇಕ ಗ್ರಾಹಕರು ಮಂಗಳೂರು ಮತ್ತು ಇತರ ಕರಾವಳಿ ಭಾಗದ ಕಂಪನಿಗಳಾಗಿದ್ದು, ಹಾಗಾಗಿ ಆಲ್ಲಿಗೆ ಆಗಾಗ ಹೋಗಿ ಬರುತ್ತಾ ಇದ್ದು ಗಣೇಶ್ ಪ್ರಭು. ಹೀಗೇ ಒಂದು ದಿನ ಆವರಿಗೆ ಹೊಸ ಐಡಿಯಾ ಹೊಳೆಯಿತು. ಚಾಕೊಲೇಟ್ ಉತ್ಪನ್ನಗಳ ಜೊತೆ ತಾನೇಕೆ ಗೋಡಂಬಿ ವ್ಯಾಪಾರ ಶುರು ಮಾಡಬಾರದು? ಎಂಬ ಐಡಿಯಾ ಅದು.

ಗಣೇಶ್ ಪ್ರಭು ತಡ ಮಾಡಲೇ ಇಲ್ಲ. ಆಖಾಡಕ್ಕೆ ಇಳಿದೇ ಬಿಟ್ಟರು. ಇಬ್ಬರು ಹುಡುಗರನ್ನು ಜೊತೆ ಹಾಕಿಕೊಂಡ್ರು. ಮಂಗಳೂರಿಂದ ಗೋಡಂಬಿ ತಂದು ಅದನ್ನು ಬೆಂಗಳೂರಿನ ಗ್ರಾಹಕರಿಗೆ ಮಾರಾಟ ಮಾಡಲು ಶುರು ಮಾಡಿದ್ರು. 2002ರಲ್ಲಿ ಪ್ರಭು ಅಂಡ್ ಕಂಪನಿ ಹೆಸರಿನಲ್ಲಿ ತಮ್ಮದೇ ಕಂಪನಿ ಶುರು ಮಾಡಿದ್ರು.

2003ರ ಹೊತ್ತಿಗೆ ವ್ಯಾಪಾರ 40-50 ಲಕ್ಷದಷ್ಟು ಆಗುತ್ತಿತ್ತು. 2004ಕ್ಕೆ ದೊಡ್ಡದೊಂದು ಕಟ್ಟಡಕ್ಕೆ ವ್ಯಾಪಾರ ಶಿಫ್ಟ್ ಆಯ್ತು. ತಮ್ಮ ಕಾರ್ಯಕ್ಷಮತೆ, ವ್ಯಾಪಾರದಲ್ಲಿ ಚಾಣಾಕ್ಷತೆ, ಪ್ರಾಮಾಣಿಕತೆ ಇದ್ದಿದ್ದರಿಂದ ಸಹಜವಾಗಿ ವ್ಯವಹಾರ ದೊಡ್ಡದಾಗಿ ಬೆಳೆಯುತ್ತಾ ಹೋಯ್ತು.

ಆಷ್ಟು ಹೊತ್ತಿಗೆ ಉದ್ಯಮದ ಒಳಗುಟ್ಟು ಚೆನ್ನಾಗಿ ಅರಿತಿದ್ದ ಗಣೇಶ ಉದ್ಯಮದಲ್ಲಿ ತಮ್ಮದೇ ಹೆಸರು ಮಾಡುತ್ತಾ ಹೋದ್ರು. ಗೋಡಂಬಿ ಸಂಸ್ಕರಣೆಯಲ್ಲಿ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ತಾವೇ ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸಿಕೊಳ್ಳುತ್ತಾ ಯಶಸ್ವಿ ಉದ್ಯಮಿಯಾಗುವತ್ತ ಹೆಜ್ಜೆ ಇಡತೊಡಗಿದ್ರು.

ವ್ಯಾಪಾರ ವಹಿವಾಟು ಹೆಚ್ಚಾತೊಡಗಿದಂತೆ 2006ರಲ್ಲಿ ವಿಜಯಾ ಬ್ಯಾಂಕಿಂದ ಒಂದು ಕೋಟಿ ರೂಪಾಯಿ ಸಾಲ ಪಡೆದು, ಬನ್ನೇರುಘಟ್ಟದ ಮುಖ್ಯ ರಸ್ತೆಯಲ್ಲೇ ಅರ್ಧ ಎಕರೆ ಜಮೀನು ಖರೀದಿಸಿದ್ರು. ಹಿಂದೂಸ್ತಾನ್ ಮುಕ್ತಾ ಕ್ಯಾಶ್ಯೂ ಪ್ರೋಸೆಸಿಂಗ್ ಕಂಪನಿ ಸ್ಥಾಪನೆಯಾದದ್ದು ಆಗಲೇ. ತಮ್ಮ ತಾಯಿ ಮುಕ್ತಾ ಹೆಸರಿನಲ್ಲೆ ಗಣೇಶ್ ಪ್ರಭು ಈ ಕಂಪನಿಯನ್ನು ಸ್ಥಾಪಿಸಿದ್ರು.

ಆಂದಿನಿಂದ ಇಂದಿನವರೆಗೆ ಹಿಂದೂಸ್ತಾನ್ ಮುಕ್ತಾ ಕ್ಯಾಶ್ಯೂ ಪ್ರೋಸೆಸಿಂಗ್ ಕಂಪನಿ, ಗೋಡಂಬಿ ಸಂಸ್ಕರಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡುತ್ತಾ ಬಂದಿದೆ. 2001ರಲ್ಲಿ ಇಬ್ಬರು ಹುಡುಗರೊಂದಿಗೆ ಆರಂಭವಾದ ಗಣೇಶ್ ಪ್ರಭು ಆವರ ಗೋಡಂಬಿ ಪಯಣ, 2023ರ ವೇಳೆಗೆ 70-80 ಮಂದಿ ನೌಕರರನ್ನು ಹೊಂದಿರುವ ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ವಾರ್ಷಿಕ 40-50 ಲಕ್ಷ ವಹಿವಾಟಿನಿಂದ ಆರಂಭವಾದ ಈ ಪಯಣ ಈಗ 2023ರ ಹೊತ್ತಿಗೆ 80-100 ಕೋಟಿ ರೂ ವಹಿವಾಟು ನಡೆಸುವ ಸಂಸ್ಥೆಯಾಗಿ ಬೆಳೆದಿದೆ. 2002ರಲ್ಲಿ 2-3 ಟನ್ ಗೋಡಂಬಿ ಸಂಸ್ಕರಿಸುತ್ತಿದ್ದ ಸಂಸ್ಥೆಯೀಗ 200-250 ಟನ್ ಗೋಡಂಬಿ ಸಂಸ್ಕರಣೆ ಮಾಡುತ್ತಿದೆ.

ದೇಶದ ಬಹುತೇಕ ಆಹಾರೋತ್ಪನ್ನ ಕಂಪನಿಗಳಿಗೆ ಈಗ ಗೋಡಂಬಿ ಉತ್ಪನ್ನಗಳನ್ನು ಪೂರೈಕೆ ಮಾಡಲಾಗುತ್ತಿದೆ. ಗೋಡಂಬಿಯ ಉಪ ಉತ್ಪನ್ನಗಳಾದ ಗೋಡಂಬಿ ರವೆ, ಗೋಡಂಬಿ ಪುಡಿಯಿಂದ ಹಿಡಿದು ಎಲ್ಲರೀತಿಯ ಉತ್ಪನ್ನಗಳನ್ನು ಪೂರೈಸಲಾಗುತ್ತಿದೆ.

ಹಿಂದೂಸ್ತಾನ್ ಮುಕ್ತಾ ಕ್ಯಾಶ್ಯೂ ಪ್ರೋಸೆಸಿಂಗ್ ಎಂಬ ತಮ್ಮದೇ ಬ್ರ್ಯಾಂಡ್ ಅನ್ನು ಗಣೇಶ್ ಪ್ರಭು ದೇಶಾದ್ಯಂತ ಜನಪ್ರಿಯಗೊಳಿಸಿದ್ದಾರೆ ಬ್ರಿಟಾನಿಯಾ, ಹಾವ್ ರ್ಮೋ, ಆಮೂಲ್, ಕೆಎಂಎಫ್, ಯೂನಿಬಿಕ್ ಸೇರಿದಂತೆ ದೇಶದ ಬಹುತೇಕ ಕಂಪನಿಗಳಿಗೆ ಈಗ ತನ್ನ ಉತ್ಪನ್ನಗಳನ್ನು ಪೂರೈಸುತ್ತಿದೆ ಹಿಂದೂಸ್ತಾನ್ ಮುಕ್ತಾ ಕ್ಯಾಶ್ಯೂ ಪ್ರೋಸೆಸಿಂಗ್ ಕಂಪನಿ.

When farmers' friend turns forests' foe

If you have a garden, you know how welcome earthworms are: they nibble on all the decaying litter and break them up into nutrient-rich chunks that make it easier for plants to absorb and grow. They also help aerate the soil as they dig around, thus helping the roots penetrate further down. The result? A bonanza of flowers, vegetables and fruits in the garden.

But earthworms aren't harmless when they are in places they aren't supposed to be. Of the 6,000 plus species of earthworms in the world, over 120 are widely distributed and have become invasive species in parts of the world, particularly in North America. Since the 1600s, European settlers who came to this part of the world brought along many invasive species, including the 'helpful' earthworms, most of them belonging to the genus Lumbricus. The lack of local earthworms may have also played a role.

More than 10,000 years ago, the glaciers from the Pleistocene Age (also called the Ice Age) wiped off many native species of earthworms in North America. The remaining few went underground deep into the layers of the soil as invading species began establishing their colonies in recent centuries. Now, most earthworms on the continent have become a problem for the forests that house some of the oldest trees on the planet.

As earthworms chew up leaf litter on the forest floor, they enrich the soil with nutrients, thus disturbing the soil composition that native plants have adapted to grow in. As a result, many non-native plants thrive on the enriched soil, stifling other native plants. Over the years, scientists say earthworms have resulted in many native orchids and birds being endangered. As younger forests are full of leaf litter, they have more earthworms than older forests.

The story of the farmer-friendly earthworms shows the concerns with invasive species: they may be super helpful on their native land but when they are introduced to other places, they often always have unexpected consequences, sometimes affecting the whole ecosystem.

- Spoorthy Raman



17-06-2023
Dec Hrd Pg 07

'ಕೃಷಿ ಕ್ಷೇತ್ರ ಸಮಸ್ಯೆ ಪರಿಹಾರಕ್ಕೆ ಜಾಗತಿಕ ಪ್ರಯತ್ನ ಅಗತ್ಯ'

ಹೈದರಾಬಾದ್: ''ಭವಿಷ್ಯದಲ್ಲಿ ಜಾಗತಿಕ ಆಹಾರ ಭದ್ರತೆ ಕಾಯ್ದುಕೊಳ್ಳಲು ವಿಶ್ವ ಸಮುದಾಯ ಕೃಷಿ ಕ್ಷೇತ್ರ ಎದುರಿಸುತ್ತಿರುವ ಸವಾಲು, ಸಮಸ್ಯೆಗಳ ನಿವಾರಣೆಗೆ ಆದ್ಯತೆಯ ಮೇಲೆ ಸಾಮೂಹಿಕ ಪ್ರಯತ್ನ ನಡೆಸುವ ಅಗತ್ಯವಿದೆ,'' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

- ಜಿ20 ಕೃಷಿ ಸಚಿವರ ಮೂರು ದಿನಗಳ ಸಭೆ ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ
- ಕೃಷಿಯಿಂದ 250 ಕೋಟಿ ಜನರಿಗೆ ಆಹಾರ, ಉದ್ಯೋಗ

ಹೈದರಾಬಾದ್‌ನಲ್ಲಿ ಆಯೋಜಿಸಲಾಗಿದ್ದ ಜಿ20 ಕೃಷಿ ಸಚಿವರ ಮೂರು ದಿನಗಳ ಸಭೆ ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಪ್ರಧಾನಿ ಮೋದಿ, ''ಹವಾಮಾನ ಬದಲಾವಣೆಯ ವೈಪರೀತ್ಯಗಳು ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತಿದೆ. ವಿಷಮಯ ಸನ್ನಿವೇಶದ ಸವಾಲುಗಳನ್ನು ದಕ್ಷಿಣದ ರಾಷ್ಟ್ರಗಳು ಹೆಚ್ಚು ಅನುಭವಿಸುತ್ತಿವೆ,'' ಎಂದು ಹೇಳಿದರು.

''ದಕ್ಷಿಣ ರಾಷ್ಟ್ರಗಳು ಕೃಷಿ ಕ್ಷೇತ್ರದ ಮೂಲಕ ಜಾಗತಿಕವಾಗಿ 250 ಕೋಟಿ ಜನರಿಗೆ ಆಹಾರ, ಉದ್ಯೋಗ, ಜೀವನ ಭದ್ರತೆ ಕಲ್ಪಿಸಿದೆ. ವಿಶ್ವದ ಆರ್ಥಿಕ ಬೆಳವಣಿಗೆಗೆ ಶೇ.30ರಷ್ಟು ಜಿಡಿಪಿ, ಶೇ.60ರಷ್ಟು ಉದ್ಯೋಗ ಕಲ್ಪಿಸಿದೆ. ಆದರೂ ಕೃಷಿ ಕ್ಷೇತ್ರ ಸಮಸ್ಯೆಗಳ ಸುಳಿಗೆ ಸಿಲುಕಿದೆ. ಕೋವಿಡ್ ಸೋಂಕು ಬಂದ ಬಳಿಕ ಅದರ ಪರಿಣಾಮಗಳು ಕೃಷಿ ವಲಯವನ್ನು ಇನ್ನಿಲ್ಲದಂತೆ ಕಾಡಿದವು,'' ಎಂದು ಮೋದಿ ತಿಳಿಸಿದರು.

17-06-2023
V-karanataka Pg 07